# ನಾಲ್ಕನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ವಿಶೇಷ ನ್ಯಾಯಾಲಯ, ಬಾಗಲಕೋಟೆ

**Spl.Case No.3/2020**

| | | | |
|---|---|---|---|
| ಹೆಸರು | : | ವಿನಯ ಹೊಸರಡ್ಡಿ | ಫ್ರಾಸಾ-38 |
| ತಂದೆಯ ಹೆಸರು | : | ಮಹಾದೇವ | ಚಾಸಾ-110 |
| ವಯಸ್ಸು | : | 40 ವರ್ಷ | |
| ಉದ್ಯೋಗ | : | ಸಿಪಿಸಿ-959 ಬೀಳಗಿ ಪೊಲೀಸ ಠಾಣೆ | |
| ವಿಳಾಸ 6 | : | ಬೀಳಗಿ | |

ದಿಃ 16.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರಿಂದ**

ನಾನು 2019 ರಿಂದ 2020 ಜೂನ್‌ವರೆಗೆ ಪೊಲೀಸ ಪೇದೆ ಅಂತಾ ಮುಧೋಳ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ 22.11.2019 ರಂದು ಗುನ್ನೆ 160/2019 ರಲ್ಲಿ ಹಿಂದಿನ ದಿನ ಡಿ.ಎನ್.ಎ ಎಫ್.ಎಸ್.ಎಲ್. ಮಾಡಿಸಿಕೊಂಡು ಬರಲು ನನಗೆ 22 ವಸ್ತುಗಳನ್ನು ಕೊಟ್ಟಿದ್ದರು. ಅಂದು ನನಗೆ 22 ವಸ್ತುಗಳನ್ನು ನ್ಯಾಯಾಲಯದಲ್ಲಿ ಜಮಾ ಮಾಡಿರುವುದನ್ನು ಹಾಗೂ ಮೃತನ ಮಗನ ರಕ್ತದ ಶ್ಯಾಂಪಲ್, ತೋಳು ಇರುವ ಶರ್ಟು, ಹಳದಿ ಬನಿಯನ್, ಡಾಂಬರ ರಸ್ತೆಯ ಮೇಲಿ ಬಿದ್ದಿದ್ದ ರಕ್ತವನ್ನು ತೆಗೆದಿದ್ದು, ಚಪ್ಪಲಿ, ಧೋತರ, ಕೆಳ ಒಳಉಡುಪು, ರಕ್ತದ ಕಲೆಯಾಗಿದ್ದ ಮಚ್ಚು, ತಲವಾರ ಇವುಗಳನ್ನು ಬೆಂಗಳೂರಿಗೆ ಒಯ್ದು ಅದನ್ನು ಡಿ.ಎನ್.ಎ. ಪರೀಕ್ಷೆಗೆ ಒಳಪಡಲು ನನ್ನನ್ನು ನಿಯುಕ್ತಿಗೊಳಿಸಿದ್ದರು ಆ ಕುರಿತು ನ್ಯಾಯಾಲಯದಲ್ಲಿ ಜಮಾ ಆಗಿರುವ ಮುದ್ದೆಮಾಲು-2, 4, 5 ರಿಂದ 20 ನಾನು ಒಯ್ದಿದ್ದೇನೆ. ಅದರಲ್ಲಿನ ರಕ್ತದ ಶ್ಯಾಂಪಲ್ ಮೃತನ ಮಗನಿಂದ ತೆಗೆದಿದ್ದು ಇತ್ತು. ಅವುಗಳನ್ನು ದಿಃ 22.11.2019 ರಂದು ಮಡಿವಾಳ ಎಫ್.ಎಸ್.ಎಲ್.ಗೆ ತೆಗೆದುಕೊಂಡು ಹೋಗಿದ್ದು ಇದೆ. ಆ ಕುರಿತು ನಾನು ಲಿಖಿತ ವರದಿ ನೀಡಿದ್ದೇನೆ. ಅದನ್ನು ಈಗ ನೋಡಿದ್ದು ಅದನ್ನು ನಿಪಿ-74 ಎಂದು ಸಾಕ್ಷಿಯ ಸಹಿಯನ್ನು ನಿಪಿ-74(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಶ್ರೀ.ಎಸ್.ಸಿ.ಹೆಚ್. ವಕೀಲರಿಂದ ಆರೋಪಿ ಪರ**

ಸದರಿ ಮುದ್ದೆಮಾಲುಗಳನ್ನು ನನಗೆ ಹಸ್ತಾಂತರಿಸಿದ್ದಾಗ ಅವುಗಳೆಲ್ಲ ಪ್ಯಾಕ ಮಾಡಿ ಶೀಲ್ ಮಾಡಿದ್ದೆ ಇದ್ದವು. ಸದರಿ ಮುದ್ದೆಮಾಲುಗಳ ಬಣ್ಣ, ವಿವರ ನಾನು ಹೇಳಲು ಅವಕಾಶವೇ ಇರುವುದಿಲ್ಲ ಎಂದು ಸೂಚಿಸಿದರೆ ಸಾಕ್ಷಿ ನಾನು ಪ್ಯಾಕ ಮಾಡಿದ ವಸ್ತುಗಳ ಮೇಲಿನ ಚೀಟಿಯಲ್ಲಿ ಬರೆದ ವಿವರದಂತೆ ಹೇಳುತ್ತಿದ್ದೇನೆ. ಸದರಿ ನಾನು ಹೇಳುವಂತೆ ಮುದ್ದೆಮಾಲುಗಳ ಮೇಲೆ ಹಾಕಿರುವ ಶೀಲನಲ್ಲಿ ಏನು ಎಂದು ಹಾಕಲಾಗಿದೆ ಎಂದರೆ ಸಾಕ್ಷಿ ನಾನು ಆ ಕುರಿತು ವಿವರ ಹೇಳಲಾರೆ. ಸದರಿ ಮಾದರಿ ಶೀಲನ್ನು ನನಗೆ ನೀಡಿಲ್ಲ. ನಾನು ಸಾಕ್ಷದಲ್ಲಿ ನುಡಿದಂತೆ ಎಫ್.ಎಸ್.ಎಲ್. ಗೆ ಮುದ್ದೆಮಾಲುಗಳನ್ನು ಒಯ್ದಿಲ್ಲ ಅವುಗಳು ವಿಶ್ಲೇಷಣೆಗೆ ಒಳಪಟ್ಟಿಲ್ಲ ಹಾಗೂ ನಾನು ಅವುಗಳನ್ನು ಪುನಃ ನಿಯಮಾನುಸಾರ ಪಡೆದು ತಂದು ತನಿಖಾಧಿಕಾರಿ ಮುಂದೆ ಹಾಜರಿಸಿದ್ದೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಇಲ್ಲ. ವಿಠ್ಠಲ ಸದಾಶಿವ ತಳಗೇರಿ ಮಗನ ಶ್ಯಾಂಪಲ್ ಎಲ್ಲಿ ಯಾರು ತೆಗೆದಿದ್ದಾರೆ ಎಂದರೆ ವೈದ್ಯರು ದಿಃ 21.11.2019 ರಂದು ಶ್ಯಾಂಪಲ್ ತೆಗೆದಿದ್ದಾರೆ. ಎಲ್ಲಿ ತೆಗೆದಿದ್ದಾರೆ ಎಂದು ಪ್ರಶ್ನಿಸಿದರೆ ನನಗೆ ಅದು ನೆನಪಿಲ್ಲ. ನಾನು ಯಾವುದೇ ಕರ್ತವ್ಯವನ್ನು ನಿಯಮಾನುಸಾರ ಮಾಡಿಲ್ಲ, ಮೇಲಾಧಿಕಾರಿಗಳ ಜೊತೆಗೆ ದಾಖಲೆಗಳನ್ನು ಸೃಷ್ಟಣೆ ಮಾಡಲಾಗಿದೆ ಎಂದರೆ ಇಲ್ಲ. ನಾನು ನಿಪಿ-74 ರಂತೆ ಸುಳ್ಳು ವರದಿ ಮಾಡಿದ್ದೇನೆ ಎಂದರೆ ಇಲ್ಲ.

ಮರು ಸವಾಲು ಇಲ್ಲ.
(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು

ನಾಲ್ಕನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಶೇಷ ನ್ಯಾಯಾಧೀಶರು, ಬಾಗಲಕೋಟೆ.

# ನಾಲ್ಕನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ವಿಶೇಷ ನ್ಯಾಯಾಲಯ, ಬಾಗಲಕೋಟೆ

**Spl.Case No.3/2020**

| | | | |
|---|---|---|---|
| ಹೆಸರು | : | ಆನಂದ ಮಾಳಿ | ಫ್ರಾಸಾ-37 |
| ತಂದೆಯ ಹೆಸರು | : | ಸದಾಶಿವ | ಚಾಸಾ-108 |
| ವಯಸ್ಸು | : | 40 ವರ್ಷ | |
| ಉದ್ಯೋಗ | : | ಸಿಪಿಸಿ-1094 ಜಮಖಂಡಿ ಗ್ರಾಮೀಣ ಪೊಲೀಸ ಠಾಣೆ | |
| ವಿಳಾಸ 6 | : | ಪೊಲೀಸ ಕ್ವಾರ್ಟಸ ಜಮಖಂಡಿ | |

ದಿಃ 16.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

## ಮುಖ್ಯ ವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರಿಂದ

ನಾನು 2013 ರಿಂದ 2020 ರವರೆಗೆ ಪೊಲೀಸ ಪೇದೆ ಅಂತಾ ಮುಧೋಳ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ21.10.2019 ರಂದು ಠಾಣಾ ಕರ್ತವ್ಯದಲ್ಲಿ ಇದ್ದಂತೆ ಚಾಸಾ-127 ರವರ ಆದೇಶದಂತೆ ನ್ಯಾಯಾಲಯದಲ್ಲಿ ಜಮಾ ಮಾಡಿರುವ ಗುನ್ನೆ 160/2019 ರಲ್ಲಿನ 20 ವಸ್ತುಗಳನ್ನು ತನಿಖಾಧಿಕಾರಿ ನೀಡಿದಂತೆ ಅವುಗಳನ್ನು ಆರ್.ಎಫ್.ಎಸ್.ಎಲ್. ಬೆಳಗಾವಿಗೆ ಹೋಗಿ ನೀಡಿದ್ದು, ಆ ಕುರಿತು ಹಿಂಬರಹ ಪಡೆದು ತಂದು ಠಾಣಾಧಿಕಾರಿ ಮುಂದೆ ಹಾಜರಿಸಿದ್ದೇನೆ. ಅವುಗಳನ್ನು ಈಗ ನೋಡಿದ್ದು ಒಟ್ಟು ನಾಲ್ಕು ಪುಟ ಇದ್ದು ಅದನ್ನು ನಿಪಿ-72 ಎಂದು ಅದರಲ್ಲಿನ ಕೊನೆಯ ಪುಟದಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-72(ಎ) ಎಂದು ಗುರುತಿಸಲಾಗಿದೆ. ಸದರಿ ಎಫ್.ಎಸ್.ಎಲ್. ನಿಂದ ಪರೀಕ್ಷಾ ನಂತರ ನನಗೆ ನೀಡಿದ್ದ 20 ವಸ್ತುಗಳನ್ನು ಪುನಃ ತನಿಖಾಧಿಕಾರಿ ಮುಂದೆ ತಂದು ವಾಪಸ್ಸ ನೀಡಿದ್ದೇನೆ. ಆ ಕುರಿತು ವರದಿ ಮಾಡಿದ್ದೇನೆ ಅದನ್ನು ನಿಪಿ-73 ಎಂದು ಸಾಕ್ಷಿಯ ಸಹಿಯನ್ನು ನಿಪಿ-73(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಶ್ರೀ.ಎಸ್.ಸಿ.ಹೆಚ್. ವಕೀಲರಿಂದ ಆರೋಪಿ ಪರ**

ನನಗೆ ವಸ್ತುಗಳನ್ನು ಒಯ್ಯುದ್ದ ಹಿಂಬರಹ ಪಡೆಯುವ ಕುರಿತು ಲಿಖಿತ ಆದೇಶ ಮಾಡಿದ್ದರಾ ಎಂದರೆ ಮೌಖಿಕ ಆದೇಶ ಮಾಡಿದ್ದರು. ಸದರಿ ಮುದ್ದೆಮಾಲುಗಳೆಲ್ಲ ತನಿಖಾಧಿಕಾರಿ ಚಾಸಾ-127 ರ ವಶದಲ್ಲಿ ಇದ್ದವು. ಸದರಿ ನಾನು ಸಾಕ್ಷ್ಯದಲ್ಲಿ ನುಡಿದಂತೆ ಯಾವುದೇ ವಸ್ತುಗಳನ್ನು ಒಯ್ದಿಲ್ಲ ಅವುಗಳನ್ನು ವಾಪಸ್ಸ ತಂದು ಪುನಃ ತನಿಖಾಧಿಕಾರಿಗೆ ನೀಡಿಲ್ಲ ಎಂದು ಸೂಚಿಸಿದರೆ ಸರಿಯಲ್ಲ. ನಿಪಿ-72, 73 ನ್ನು ಪ್ರಕರಣದಲ್ಲಿ ತನಿಖಾಧಿಕಾರಿಯ ಅನುಕೂಲಕ್ಕೆ ಸೃಷ್ಟಣೆ ಮಾಡಲಾಗಿದೆ ಎಂದು ಸೂಚಿಸಿದರೆ ಸರಿಯಲ್ಲ. ಮುದ್ದೆಮಾಲುಗಳನ್ನು ಪ್ರಕರಣಕ್ಕಾಗಿ ಸೃಷ್ಟಣೆ ಮಾಡಲಾಗಿದೆ ಎಂದು ಸೂಚಿಸಿದರೆ ಸರಿಯಲ್ಲ.

ಮರು ಸವಾಲು ಇಲ್ಲ.
(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು

ನಾಲ್ಕನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಶೇಷ ನ್ಯಾಯಾಧೀಶರು, ಬಾಗಲಕೋಟೆ.

<u>ನಾಲ್ಕನೇ ಹೆಚ್ಚುವರಿ **ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ವಿಶೇಷ ನ್ಯಾಯಾಲಯ, ಬಾಗಲಕೋಟೆ**</u>

**<u>Spl.Case No.3/2020</u>**

| | | |
|---|---|---|
| ಹೆಸರು | : ರಮೇಶ ಮಸಳಿ | ಫ್ರಾಸಾ-36 |
| ತಂದೆಯ ಹೆಸರು | : ಸಿದ್ದರಾಮಪ್ಪ | ಚಾಸಾ-107 |
| ವಯಸ್ಸು | : 42 ವರ್ಷ | |
| ಉದ್ಯೋಗ | : ಸಿಪಿಸಿ-1048 ಜಮಖಂಡಿ ಶಹರ ಪೊಲೀಸ ಠಾಣೆ | |
| ವಿಳಾಸ 6 | : ಪೊಲೀಸ ಕ್ವಾರ್ಟಸ ಜಮಖಂಡಿ | |

ದಿಃ 16.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರಿಂದ**

ನಾನು 2018 ರಿಂದ 2024 ರವರೆಗೆ ಪೊಲೀಸ ಪೇದೆ ಅಂತಾ ಮುಧೋಳ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ16.10.2019 ರಂದು ಬೆಳಗಿನ ಜಾವಾ 3.30 ನಾನು ಕರ್ತವ್ಯದಲ್ಲಿ ಇದ್ದಂತೆ ತನಿಖಾಧಿಕಾರಿ ಆದೇಶದ ಅನ್ವಯ ಮಲೆಪ್ಪ ತಂ.ಸಂತಪ್ಪ ತಳಗೇರಿ ಈತನ ಶವ ಪರೀಕ್ಷೆ ನಡೆಸಿದ್ದು, ನಂತರ ವಿ.ಎಂ.ಕುಂಟೋಜಿ ಬಾಗಲಕೋಟೆ ಆಸ್ಪತ್ರೆಯಲ್ಲಿ ಬೆಳಿಗ್ಗೆ 5.30 ರಿಂದ 6.30 ರವರ ಶವ ಪರೀಕ್ಷೆ ಮಾಡಿಸಿ, ವೈದ್ಯರು ಶವದ ಮೇಲಿನ ವಸ್ತುಗಳನ್ನು ಕೊಟ್ಟಿದ್ದು ಅವುಗಳನ್ನು ತನಿಖಾಧಿಕಾರಿಗೆ ಒಪ್ಪಿಸಿದ್ದೇನೆ. ಆ ಕುರಿತು ಲಿಖಿತ ವರದಿ ನೀಡಿದ್ದು ಅದನ್ನು ನಿಪಿ-71 ಎಂದು ಸಾಕ್ಷಿಯ ಸಹಿಯನ್ನು ನಿಪಿ-71(ಎ) ಎಂದು ಗುರುತಿಸಲಾಯಿತು. ಮುದ್ದೆಮಾಲು-6, 7, 8, 14, 15 ಮತ್ತು 21 ಇವುಗಳನ್ನು ತನಿಖಾಧಿಕಾರಿ ಚಾಸಾ-127 ರವರ ಮುಂದೆ ಹಾಜರು ಪಡಿಸಿದ್ದೇನೆ. ಚಾಸಾ-127 ರವರ ಆದೇಶದ ಅನ್ವಯ ಮೃತ ದೇಹವನ್ನು ಸಂಬಂಧಿಕರಿಗೆ ನೀಡಿ ಸ್ವೀಕೃತಿ ಪಡೆದಿದ್ದೇನೆ.

**ಪಾಟೀ ಸವಾಲುಃ ಶ್ರೀ.ಎಸ್.ಸಿ.ಹೆಚ್. ವಕೀಲರಿಂದ ಆರೋಪಿ ಪರ**

ನಾನು ಮುದ್ದೆಮಾಲುಗಳನ್ನು ತನಿಖಾಧಿಕಾರಿ ಮುಂದೆ ತಂದು ಹಾಜರಿಸಿಲ್ಲ ಎಂದು ಸೂಚಿಸಿದರೆ ಸರಿಯಲ್ಲ. ಸದರಿ ಮುದ್ದೆಮಾಲುಗಳ ಕುರಿತು ಯಾವುದೇ ನಿಯಮಾನುಸಾರ ನಿಯಮ ಪಾಲನೆ ಮಾಡಿಲ್ಲ ಎಂದು ಸೂಚಿಸಿದರೆ ಸರಿಯಲ್ಲ. ತನಿಖಾಧಿಕಾರಿಯ ಸೂಚನೆಯಂತೆ ನಿಪಿ-71 ನ್ನು ಸೃಷ್ಟಣೆ ಮಾಡಲಾಗಿದೆ ಆ ಕುರಿತು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಇಲ್ಲ.

ಮರು ಸವಾಲು ಇಲ್ಲ.
(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು

ನಾಲ್ಕನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಶೇಷ ನ್ಯಾಯಾಧೀಶರು, ಬಾಗಲಕೋಟೆ.

# ನಾಲ್ಕನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ವಿಶೇಷ ನ್ಯಾಯಾಲಯ, ಬಾಗಲಕೋಟೆ

**Spl.Case No.3/2020**

| | | | |
|---|---|---|---|
| ಹೆಸರು | : | ಬಸವರಾಜ ಹುನ್ನೂರ | ಫ್ರಾಸಾ-35 |
| ತಂದೆಯ ಹೆಸರು | : | ಈಶ್ವರ | ಚಾಸಾ-106 |
| ವಯಸ್ಸು | : | 40 ವರ್ಷ | |
| ಉದ್ಯೋಗ | : | ಸಿಪಿಸಿ-966 ತೇರದಾಳ ಪೊಲೀಸ ಠಾಣೆ | |
| ವಿಳಾಸ 6 | : | ತೇರದಾಳ | |

ದಿಃ 16.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

## ಮುಖ್ಯ ವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರಿಂದ

ನಾನು ದಿನಾಂಕಃ 25.07.2019 ರಿಂದ 01.11.2019 ರವರೆಗೆ ಪೊಲೀಸ ಪೇದೆ ಅಂತಾ ಮುಧೋಳ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ16.10.2019 ರಂದು ನಾನು ಕರ್ತವ್ಯದಲ್ಲಿ ಇದ್ದಂತೆ ತನಿಖಾಧಿಕಾರಿ ಆದೇಶದ ಅನ್ವಯ ವಿಠ್ಠಲ ಭರಮಪ್ಪ ತಳಗೇರಿ ರವರ ಮೃತ ದೇಹದ ಶವ ಪರೀಕ್ಷೆ ಮಾಡಲು ಒಪ್ಪಿಸಿ ನಂತರ ವೈದ್ಯರು ಶವದ ಮೇಲಿನ ವಸ್ತುಗಳನ್ನು ಕೊಟ್ಟಿದ್ದು ಅವುಗಳನ್ನು ತನಿಖಾಧಿಕಾರಿಗೆ ಒಪ್ಪಿಸಿದ್ದೇನೆ. ಆ ಕುರಿತು ಲಿಖಿತ ವರದಿ ನೀಡಿದ್ದು ಅದನ್ನು ನಿಪಿ-70 ಎಂದು ಸಾಕ್ಷಿಯ ಸಹಿಯನ್ನು ನಿಪಿ-70(ಎ) ಎಂದು ಗುರುತಿಸಲಾಯಿತು. ಮುದ್ದೆಮಾಲು-5, 12, 13, 17, 22 ಇವುಗಳನ್ನು ತನಿಖಾಧಿಕಾರಿ ಚಾಸಾ-127 ರವರ ಮುಂದೆ ಹಾಜರು ಪಡಿಸಿದ್ದೇನೆ.

## ಪಾಟೀ ಸವಾಲುಃ ಶ್ರೀ.ಎಸ್.ಸಿ.ಹೆಚ್. ವಕೀಲರಿಂದ ಆರೋಪಿ ಪರ

ನಾನು ಮುದ್ದೆಮಾಲುಗಳನ್ನು ತನಿಖಾಧಿಕಾರಿ ಮುಂದೆ ತಂದು ಹಾಜರಿಸಿಲ್ಲ ಎಂದು ಸೂಚಿಸಿದರೆ ಸರಿಯಲ್ಲ. ಸದರಿ ಮುದ್ದೆಮಾಲುಗಳ ಕುರಿತು ಯಾವುದೇ

ನಿಯಮಾನುಸಾರ ನಿಯಮ ಪಾಲನೆ ಮಾಡಿಲ್ಲ ಎಂದು ಸೂಚಿಸಿದರೆ ಸರಿಯಲ್ಲ. ತನಿಖಾಧಿಕಾರಿಯ ಸೂಚನೆಯಂತೆ ನಿಪಿ-70 ನ್ನು ಸೃಷ್ಟಣೆ ಮಾಡಲಾಗಿದೆ ಆ ಕುರಿತು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಇಲ್ಲ.

ಮರು ಸವಾಲು ಇಲ್ಲ.
(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು

ನಾಲ್ಕನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಶೇಷ ನ್ಯಾಯಾಧೀಶರು, ಬಾಗಲಕೋಟೆ.